
# ಹಸಿರ ನಡುವಿನ ಹಾಲ್ನೊರೆ

ಚಿತ್ರ– ಬರಹ:
**ದತ್ತಾತ್ರೇಯ ಭಟ್ಟ, ಕಣ್ಣಿಪಾಲ**





ನಿಸರ್ಗದ ಅದ್ಭುತ ಸೃಷ್ಟಿಗಳಲ್ಲಿ ಪಶ್ಚಿಮ ಘಟ್ಟದ ಪರ್ವತ ಶ್ರೇಣಿ ಗಮನ ಸೆಳೆಯುವಂತಿದೆ. ಉತ್ತರ ಕನ್ನಡದ ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ಬಾಗಿ ಬಳುಕುವ ಹಳ್ಳಕೊಳ್ಳಗಳು ಅಸಂಖ್ಯ. ಹಳ್ಳಿಗಳ ಕೃಷಿ ಬದುಕಿಗೆ ಆಧಾರವಾಗಿರುವ ಇದೇ ಹಳ್ಳಕೊಳ್ಳ, ಹೊಳೆಗಳು ಕಾನನದಲ್ಲಿ ಜಲಪಾತಗಳಾಗಿ ಧುಮ್ಮಿಕ್ಕುವ ಮೂಲಕ ಸ್ವರ್ಗವನ್ನೇ ಧರೆಗಿಳಿಸಿವೆ. ಇಂತಹ ಅನೇಕ ಜಲಪಾತಗಳನ್ನು ಹೊಂದಿರುವ ಯಲ್ಲಾಪುರ ತಾಲೂಕು ಮಳೆಗಾಲದ ಪ್ರವಾಸಿಗರ ಆಕರ್ಷಣೆಯ ತಾಣವೆನ್ನಿಸಿದೆ. ಇನ್ನೂ ಬೆಳಕಿಗೆ ಬಾರದೆ, ಸರಿಯಾದ ರಸ್ತೆ ದಾರಿಗಳಿಲ್ಲದೆ, ಸ್ಥಳೀಯರಿಗೆ ಮಾತ್ರ ಗೊತ್ತಿರುವಂತಹ ಅಪರೂಪದ ಜಲಧಾರೆ ಈ ಎಮ್ಮೆಶಿರ್ಲ ವಜ್ರ.

ಯಲ್ಲಾಪುರ ತಾಲೂಕಿನ ಅಂಬಗಾಂವ್ ಗ್ರಾಮದ ಕಂಚಿಮನೆಯ ಕಾಡಿನಲ್ಲಿರುವ ಈ ಜಲಪಾತವು ಯಲ್ಲಾಪುರದಿಂದ 32 ಕಿ.ಮೀ. ದೂರದಲ್ಲಿದೆ. ಯಲ್ಲಾಪುರದಿಂದ ಇಡಗುಂದಿ ವಜ್ರಳ್ಳಿ ಮಾರ್ಗವಾಗಿ ಸಾಗಿದರೆ ಸಿಗುತ್ತದೆ. ಸೂರ್ಯನ ಬಿಸಿಲು ನೆಲಕ್ಕೆ ತಾಗದ ದಟ್ಟ ಕಾನನದ ಹೆಮ್ಮರಗಳ ನಡುವೆ ಬೆತ್ತದ ಮುಳ್ಳುಗಳನ್ನು ನೇವರಿಸಿ ದಾರಿ ಹುಡುಕಿಕೊಂಡು ಹೊರಟರೆ 200 ಅಡಿಯ ಪ್ರಪಾತದಲ್ಲಿ 150 ಅಡಿ ಆಳಕ್ಕೆ ಜಿಗಿಯುವ ಎಮ್ಮೆಶಿರ್ಲ ವಜ್ರದ ದರ್ಶನವಾಗುವುದು.

ಬೇಸಿಗೆಯಲ್ಲಿ ಬಸವಳಿಯುವ ಈ ಜಲಪಾತದ ನೀರು ಮಾರ್ಚ್ ಕೊನೆಯವರೆಗೆ ಮಾತ್ರ ಮೈದುಂಬಿ ಧುಮ್ಮಿಕ್ಕುತ್ತದೆ. ಬಳಿಕ ಸಂಭ್ರಮ ಕಾಣಲು ಜೂನ್‌ನ ಮಳೆ ಶುರುವಾಗಬೇಕು. ಜಲಪಾತದ ಸುತ್ತಲೂ ಎತ್ತರದ ಕಲ್ಲು ಹಾಸಿಗೆಯಿದ್ದು ಹಸಿರು ಹುಲ್ಲಿನ ಹಚ್ಚಡ ಬೆಳೆದು ನಿಂತಿದೆ. ಅಪರೂಪದ ವನ್ಯಜೀವಿಗಳು, ಜೊತೆಗೆ ಕಂಬಳಿಯಾಕಾರದ ಹೆಜ್ಜೇನು, ಪಕ್ಷಿಗಳು, ವಿವಿಧ ಬಗೆಯ ಕಾಡು ಹೂವುಗಳು ಈ ತಾಣದಲ್ಲಿ ಕಾಣಸಿಗುತ್ತವೆ.

ಮಲೆನಾಡಿನ ಘಟ್ಟದ ಇಳಿಜಾರಿನಲ್ಲಿ ಧುಮ್ಮಿಕ್ಕುವ ಈ ಜಲಪಾತವು ಪ್ರವಾಸಿಗರ ನಕ್ಷೆಯಲ್ಲಿ ಇನ್ನೂ ದಾಖಲಾಗಬೇಕಿದೆ. ಚಾರಣದ ಆಯಾಸವನ್ನು ನೀಗಿಸಿಕೊಂಡು ತುಸುಕಾಲ ನೆಮ್ಮದಿಯ ಸುಖ ಅನುಭವಿಸುವ ಈ ಪ್ರವಾಸಿ ತಾಣದ ಅಭಿವೃದ್ಧಿಯ ಬಗೆಗೆ ಸ್ಥಳೀಯರ ನೆರವಿನೊಂದಿಗೆ ಚಿಂತಿಸಬೇಕಾದ ಅನಿವಾರ್ಯತೆ ಇದೆ. ಅಜ್ಞಾತವಾಗಿರುವ ಹಾಗೂ ರುದ್ರರಮಣೀಯವಾದ ಈ ಜಲಪಾತದ ದರ್ಶನ ಸುಲಭಸಾಧ್ಯವಲ್ಲ. ಅದಕ್ಕಾಗಿ ಸ್ಥಳೀಯರ ನೆರವನ್ನು ಪಡೆಯಲೇಬೇಕು.